# ನಿಷ್ಠುರ ನ್ಯಾಯಮೂರ್ತಿ ನಿರ್ಗಮನ ಹೊಸ ಮುಖ್ಯನ್ಯಾಯಮೂರ್ತಿ ಆಗಮನ

**ಹಲವು ಮಹತ್ವದ ತೀರ್ಮಾನಗಳನ್ನು ನೀಡಿದ ತೃಪ್ತಿಯಲ್ಲಿ ಸುಪ್ರೀಂ ಕೋರ್ಟ್‌ನ 46ನೇ ಮುಖ್ಯ ನ್ಯಾಯಮೂರ್ತಿ ನಿವೃತ್ತಿಯಾಗಿದ್ದು, ನ್ಯಾ.ಎಸ್.ಎ ಬೊಬಡೆ 47ನೇ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.**


ನ್ಯಾ. ಗೊಗೊಯ್


ನ್ಯಾ. ಬೊಬಡೆ

ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಬಹುದಿನಗಳ ಕಾಲ ನೆನಪಿನಲ್ಲುಳಿಯುವಂಥ ಸುಪ್ರೀಂಕೋರ್ಟ್‌ನ 46ನೇ ನ್ಯಾಯಮೂರ್ತಿ ರಂಜನ್ ಗೊಗೊಯ್ ನ.17ರಂದು ನಿವೃತ್ತಿ ಹೊಂದಿದ್ದಾರೆ.

ಅವರು ಮುಖ್ಯ ನ್ಯಾಯಮೂರ್ತಿಯಾಗಿದ್ದ 13 ತಿಂಗಳ ಅವಧಿಯಲ್ಲಿ ಅತ್ಯಂತ ಮಹತ್ವವೆನ್ನಿಸುವ ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದದ ಪ್ರಕರಣದಲ್ಲಿ ಅಂತಿಮ ತೀರ್ಪು ನೀಡಿದ್ದಾರೆ. 1950ರಿಂದ ಈ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಲೇ ಇತ್ತು ಎನ್ನುವುದನ್ನು ಗಮನಿಸಿದಲ್ಲಿ, ನ್ಯಾ.ರಂಜನ್ ಗೊಗೊಯ್ ಅವರ ನೇತೃತ್ವದ ಪೀಠ ನೀಡಿದ ತೀರ್ಪು ಎಂತಹ ದೂರಗಾಮಿ ಪರಿಣಾಮ ಉಂಟುಮಾಡಬಲ್ಲದು ಎನ್ನುವುದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಶಬ-ರಿಮಲೆ ಪ್ರಕರಣದಲ್ಲಿಯೂ ಅವರ ಪೀಠದಿಂದ ಅತ್ಯಂತ ನಿಷ್ಠುರವಾದ ಮಧ್ಯಂತರ ತೀರ್ಪು ಹೊರಬಂದಿದೆ. ಅದನ್ನು ಏಳು ನ್ಯಾಯಾಧೀಶರ ಪೀಠಕ್ಕೆ ವರ್ಗಾಯಿಸಿದ್ದು, ಅಲ್ಲಿ ಅದು ಇನ್ನಷ್ಟು ವಿಸ್ತೃತವಾಗಿ ಚರ್ಚೆಯಾಗಲಿದೆ. ಪಾರ್ಸಿಯೇತರರನ್ನು ಮದುವೆಯಾದ ಪಾರ್ಸಿ ಹೆಣ್ಣುಮಕ್ಕಳಿಗೆ ದೇವಸ್ಥಾನಗಳಲ್ಲಿ ನಿಷೇಧ, ಮಸೀದಿಗಳಲ್ಲಿ ಮಹಿಳೆಯರಿಗೆ ನಿಷೇಧ, ಬೊಹ್ರಾ ಸಮುದಾಯದಲ್ಲಿ ಆಚರಣೆಯಲ್ಲಿರುವ ಖತ್ನಾ ಪದ್ಧತಿ ಇವೆಲ್ಲದರ ಕುರಿತು ಈ ಪೀಠ ಚರ್ಚಿಸಲಿದೆ. ಅಂದರೆ ಒಂದು ವಿಷಯವನ್ನು ಆಳವಾಗಿ ಮತ್ತು ಸಮಗ್ರವಾಗಿ ಚರ್ಚಿಸಿ ದೂರಗಾಮಿ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಅವರು ತೂಕವಾದ ತೀರ್ಪು ನೀಡುತ್ತಿದ್ದರೆನ್ನುವುದು ಇದರಿಂದ ಸುಸ್ಪಷ್ಟ.

ಇಂಥ ನ್ಯಾ.ಗೊಗೊಯ್, 45ನೇ ಮುಖ್ಯ ನ್ಯಾಯಮೂರ್ತಿಯಾಗಿದ್ದ ದೀಪಕ್ ಮಿಶ್ರಾ ಸೂಕ್ಷ್ಮ ವಿಷಯಗಳ ಕುರಿತಾದ ಪ್ರಕರಣಗಳನ್ನು ಆಯ್ದ ಪೀಠಗಳಿಗೆ ಮಾತ್ರ ನೀಡುತ್ತಿದ್ದಾರೆ ಎಂದು ದನಿ ಎತ್ತಿ ಪತ್ರಿಕಾಗೋಷ್ಠಿ ನಡೆಸಿದ್ದು ಎಲ್ಲರೂ ಹುಬ್ಬೇರುವಂತೆ ಮಾಡಿತ್ತು. ಅಂದರೆ ಅನ್ಯಾಯ ಅಂತ ಕಂಡು ಬಂದಾಗ ಅದರ ವಿರುದ್ಧ ದನಿ ಎತ್ತಲೂ ಅವರು ಹಿಂಜರಿಯಲಿಲ್ಲ. ಇದು ನಡೆದ ಕೆಲವೇ ತಿಂಗಳಲ್ಲಿ ಅವರೇ ಮುಂದಿನ ಮುಖ್ಯನ್ಯಾಯಮೂರ್ತಿ ಪೀಠದಲ್ಲಿ ಕುಳಿತರು.

ಈ ನಿಷ್ಠುರ ನ್ಯಾಯಮೂರ್ತಿ ರಾಜ-ಕೀಯ ಮನೆಯೊಂದರಿಂದ ಬಂದವರು ಎನ್ನುವುದು ಒಂದು ವಿಶೇಷ. ಅವರ ತಂದೆ ಕೇಶವ್ ಚಂದ್ರ ಗೊಗೊಯ್ 2 ತಿಂಗಳ ಕಾಲ ಅಸ್ಸಾಮಿನ ಮುಖ್ಯಮಂತ್ರಿಯಾಗಿದ್ದರು. ಮನೆತನದ ಹಿನ್ನೆಲೆ ಅದೇನೇ ಇದ್ದರೂ, ಅದರಿಂದ ನ್ಯಾಯ ವಿಲೇವಾರಿಯ ತಮ್ಮ ಕರ್ತವ್ಯಕ್ಕೆ ಲೋಪ ಬಾರದಂತೆ ಎಚ್ಚರಿಕೆ ವಹಿಸಿದ್ದರು ಎನ್ನುವುದು ಅವರ ನಡೆಯಿಂದ ಸರ್ವವಿದಿತ.

ಭಾರತದ ಸುಪ್ರೀಂಕೋರ್ಟ್‌ನ 47ನೇ ಮುಖ್ಯ ನ್ಯಾಯಮೂರ್ತಿಗಳಾಗಿ ಶರತ್ ಅರವಿಂದ್ ಬೊಬಡೆ ಅಧಿಕಾರ ಸ್ವೀಕರಿಸಲಿದ್ದಾರೆ. ಅವರು 17 ತಿಂಗಳುಗಳ ಕಾಲ ಈ ಸ್ಥಾನವನ್ನು ಅಲಂಕರಿಸಲಿದ್ದಾರೆ.